



# ರೂಮ್ ಮೇಟ್ ರಗಳೆ

## ಮಧುರ ಸ್ಮರಣೆಗೆ ಹೊಂದಾಣಿಕೆಯೇ ಮದ್ದು

ಕೆಲ ರೂಮ್ ಮೇಟ್‌ಗಳ ನಡವಳಿಕೆ ವಿಚಿತ್ರ, ವಿಲಕ್ಷಣ ವಾಗಿರುತ್ತದೆ. ಅಂಥವರೊಂದಿಗೆ ಹೊಂದಿಕೊಳ್ಳುವುದು ಕೂಡ ಕಷ್ಟ. ಆಗ ನೆಮ್ಮದಿ ಅನ್ನುವುದು ಮರೀಚಿಕೆ, ಮಧುರ ನೆನಪುಗಳಿಗಿಂತ ಕಹಿ ಸ್ಮರಣೆಗಳೇ ಹೆಚ್ಚು.

ಇಂದಿನ ಯುವಪೀಳಿಗೆ ವಿದ್ಯಾಭ್ಯಾಸ ಮತ್ತು ಉದ್ಯೋಗವನ್ನು ಅರಸಿ ದೇಶ, ವಿದೇಶಗಳಿಗೆ ಹೋಗುವಾಗ ಹಾಸ್ಟೆಲ್ ಜೀವನ ಅನಿವಾರ್ಯವೇ ಆಗಿದೆ. ಇದು ಜೀವನ ಶೈಲಿಯನ್ನೂ ಬದಲಾಯಿಸಿದೆ. ರೂಮ್ ಮೇಟ್ ಜತೆಗೆ ಕ್ಷಣ ಕ್ಷಣವನ್ನೂ ಹಂಚಿಕೊಳ್ಳುತ್ತಾ ವರ್ಷಗಟ್ಟಲೆ ಕಳೆಯಬೇಕು. ಕಿರಿಕಿರಿ ಮಾಡದ ರೂಮ್‌ಮೇಟ್ ಇದ್ದರೆ, ನೀವೂ ಕಿರಿಕಿರಿ ಸ್ವಭಾವದವರಲ್ಲದಿದ್ದರೆ ಎಷ್ಟು ವರ್ಷಗಳು ಜತೆಗಿದ್ದರೂ ಏನೂ ಆಗದು. ಇಂಥಲ್ಲಿ ನೆಮ್ಮದಿಯಿಂದ ಇರುವುದು ಸುಲಭ. ಆದರೆ ಎಲ್ಲರಿಗೂ ಆ ಅದೃಷ್ಟವಿಲ್ಲ. ಕೆಲ ರೂಮ್ ಮೇಟ್‌ಗಳ ನಡವಳಿಕೆ ವಿಚಿತ್ರ, ವಿಲಕ್ಷಣವಾಗಿರುತ್ತದೆ. ಅಂಥವರೊಂದಿಗೆ ಹೊಂದಿಕೊಳ್ಳುವುದು ಕೂಡ ಕಷ್ಟ. ಆಗ ನೆಮ್ಮದಿ ಅನ್ನುವುದು ಮರೀಚಿಕೆ, ಮಧುರ ನೆನಪುಗಳಿಗಿಂತ ಕಹಿ ಸ್ಮರಣೆಗಳೇ ಹೆಚ್ಚು.

### ಅವರ ಜತೆ ಹೇಗಿರುವುದು?

- ಹಾಸ್ಟೆಲ್ ರೂಮ್ ಮೇಟ್‌ಗಳಿಗೆ ಮೊದಲ ದಿನ 'ಹೋಮ್ ಸಿಕ್ ನೆಸ್' ಸಮಸ್ಯೆ ಸಹಜ. ಹೆದರಿಕೆಯಿಂದ ದೂರವಿರಿ. ಸ್ನೇಹಿತರನ್ನು ನೀವಾಗಿಯೇ ಮಾತನಾಡಿಸಿ, ತಾಳ್ಮೆ ವಹಿಸಿರಿ.
- ಕೋಣೆ ಸಂಗಾತಿಯ ದಿನಚರಿಯನ್ನು ತಿಳಿದುಕೊಳ್ಳಿ. ಊಟ, ಬಾತ್‌ರೂಂ, ಟಾಯ್ಲೆಟ್ ಬಳಕೆಯ ಸಂದರ್ಭದಲ್ಲಿ ಘರ್ಷಣೆಯಾಗದಂತೆ ನಿಮ್ಮ ಸಮಯ ರೂಢಿಸಿಕೊಳ್ಳಿ.
- ರೂಮ್ ಮೇಟ್‌ನ ಯಾವುದಾರೂ ವರ್ತನೆ ನಿಮಗೆ ಕಿರಿಕಿರಿ ಎನಿಸುತ್ತಿದ್ದರೆ ನಯವಾಗಿ ತಿಳಿ ಹೇಳಿ ಅದನ್ನು ಬಿಡಿಸುವುದಕ್ಕೆ ಪ್ರಯತ್ನಿಸಿ.
- ನಿಮ್ಮ ರೂಮ್‌ಮೇಟ್‌ನ ಪ್ರತಿಯೊಂದು ವಸ್ತುಗಳನ್ನು ಗೌರವಿಸಿರಿ. ಮುಂದಿನ ದಿನಗಳಲ್ಲಿ ಸಂಭವಿಸಬಹುದಾದ ಜಗಳಕ್ಕೆ ಕಡಿವಾಣ ಹಾಕಿ.
- ಆತ್ಮವಿಶ್ವಾಸ, ಪ್ರೀತಿ, ತಾಳ್ಮೆ, ಕ್ಷಮೆ ಮೊದಲಾದವುಗಳಿಂದ ಸ್ನೇಹ ಬೆಳೆಸಿ.
- ನಿಮಗೆ ಸಂಬಂಧಿಸಿದ ಸಂಗತಿಗಳನ್ನು ಸಂಗಾತಿಯಿಂದ ಗುಟ್ಟಾಗಿಡಬೇಡಿ. ಹಾಗಂತ ಎಲ್ಲವನ್ನೂ ತೆರೆದಿಡುವುದೂ ಒಳ್ಳೆಯದಲ್ಲ.
- ರೂಮ್ ಮೇಟ್‌ನ ಸಣ್ಣ ಪುಟ್ಟ ಅಗತ್ಯಗಳಿಗೆ ಹಣ ಖರ್ಚು ಮಾಡುವುದು ನಿಮಗೆಂದೂ ಹೊರೆ ಎನಿಸದು. ಮುಂದೊಂದು ದಿನ ಅದು ನಿಮಗೆ ವಾಪಸ್ ಬಂದೇ ಬರುವುದು.
- ಹಣ ಕೇಳಿ ಸ್ನೇಹ ಕಳೆದುಕೊಳ್ಳಬೇಡಿ. ರೂಮ್ ಮೇಟ್ ಸ್ನೇಹದ ಸಂಬಂಧದಲ್ಲಿ ಹಣದ ಸಹಾಯ ನಿರೀಕ್ಷೆ ಬೇಡ
- ಜಗತ್ತಿನಲ್ಲಿ ಎಲ್ಲರನ್ನು ಮೆಚ್ಚಿಸುವುದು ಅಸಾಧ್ಯ. ಆದ್ದರಿಂದ ಯಾರಾದರೂ ನಿಮ್ಮನ್ನು ಟೀಕಿಸಿದರೆ ತಲೆಕೆಡಿಸಿಕೊಳ್ಳಬೇಕಿಲ್ಲ. ಟೀಕೆಗೆ ಹೆದರಬೇಡಿ ಮತ್ತು ನೀವು ಟೀಕೆ ಮಾಡಬೇಡಿ.
- ರೂಮ್ ಮೇಟ್‌ನ ಗೆಳೆಯ/ ಗೆಳತಿಯರನ್ನು ಅನವಶ್ಯಕ ಟೀಕಿಸಬೇಡಿ. ಅವರ ನಡತೆಯಿಂದ ನಿಮಗೆ ಸಮಸ್ಯೆಯಾಗುತ್ತಿದ್ದರೆ ನಯವಾಗಿ ತಿಳಿ ಹೇಳಿ.
- ರೂಮ್ ಮೇಟ್‌ನ ತಂದೆ ತಾಯಿಯರ ಪರಿಚಯ ಮಾಡಿಕೊಳ್ಳಿ. ಆತನ/ ಆಕೆಯ ಸಂಪೂರ್ಣ ಆಗುಹೋಗು ಗೊತ್ತಿರಲಿ.
- ರೂಮ್ ಬಳಿ ಬರುವ ಅಪರಿಚಿತರ ಬಗ್ಗೆ ಎಚ್ಚರ ವಹಿಸಿ ! ಕೊಠಡಿಯ ಕಿಟಕಿ, ಬಾಗಿಲನ್ನು ಅನವಶ್ಯಕ ತೆರೆದಿಡಬೇಡಿ.

ರೂಮ್ ಮೇಟ್ ಆಗುವುದೆಂದರೆ ಸ್ನೇಹದ ಆರಂಭ ಬಿಂದು. ದಿನಗಳು ಕಳೆದಂತೆ ಆತ/ ಕೆ ಬೆಸ್ಟ್ ಫ್ರೆಂಡ್ ಆಗಬಹುದು. ಇಬ್ಬರ ನಡುವೆ ಒಳ್ಳೆಯ ಸ್ನೇಹ ಆರಂಭದಿಂದಲೇ ಮೂಡದಿದ್ದರೆ ಭವಿಷ್ಯದ ಗೆಳೆತನ ಅಸಾಧ್ಯವೇ ಸರಿ.

■ ಸುಷ್ಮಾ ಸಿ. ರಾಯ್ಕರ್